ಈ ಮಧ್ಯೆ ಕಾರ್ಮಿಕರು ದಿನಾಂಕ 02–07–2014 ರಿಂದ ಕೆಲಸವನ್ನು ಸ್ಥಗಿತಗೊಳಿಸಿ ಕಾರ್ಖಾನೆ ಆವರಣದಲ್ಲಿ ಮುಷ್ಕರವನ್ನು ಪ್ರಾರಂಭಿಸಿರುತ್ತಾರೆ.

ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಸಂಸ್ಥೆಯ ಆವರಣದಲ್ಲಿ ಮುಷ್ಕರ ನಡೆಸುತ್ತಿದ್ದುದ್ದರಿಂದ, ಆಡಳಿತವರ್ಗ ದಿನಾಂಕ 08–07–2014 ರಿಂದ ತಾತ್ಕಾಲಿಕವಾಗಿ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಕಾರ್ಖಾನೆಗೆ ಬೀಗಮುದ್ರೆ ವಿಧಿಸಿರುತ್ತಾರೆ. ಪುನಃ ದಿನಾಂಕ 09–07–2014 ರಂದು ಸಭೆಯನ್ನು ಸಹಾಯಕ ಕಾರ್ಮಿಕ ಆಯುಕ್ತರು, ಹುಬ್ಬಳ್ಳಿ ಇವರು ಕರೆದಿದ್ದು, ಸಂಧಾನ ಮುಂದುವರೆಯುತ್ತಿದೆ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಮಾನ್ಯ ಅಧ್ಯಕ್ಷರೆ, ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಟನೆಗಳವರಿಗೆ ಒಂದು ದಿನ ಕಾಲಾವಕಾಶ ಕೇಳಿರುವುದರಿಂದ ನಾಳೆಗೆ ಆ ಸಂಧಾನ ಸಭೆ ಇದೆ. ಖಂಡಿತವಾಗಿಯೂ ಸಭೆಯನ್ನು ಯಶಸ್ವಿಗೊಳಿಸಿ ಅಲ್ಲಿನ ಕಾರ್ಮಿಕರು ಕೆಲಸವನ್ನು ಮುಂದುವರೆಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕಾರ್ಮಿಕ ಇಲಾಖೆಯ ಆಯುಕ್ತರು ಕಂಪನಿಯ ಕಾರ್ಮಿಕರ ಪರವಾಗಿ ಇರುವಂತೆ ಹೇಳಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ್ : ಖಂಡಿತವಾಗಿಯೂ ಕಾರ್ಮಿಕರ ಪರವಾಗಿ ಇರುವಂತೆ ಕ್ರಮ ಕೈಗೊಳ್ಳುತ್ತೇನೆ.

XI) ವಸತಿ ಯೋಜನೆ ಹಕ್ಕುಪತ್ರದಲ್ಲಿ ಪತ್ನಿಯ ಹೆಸರನ್ನು ನಮೂದಿಸುವ ಬಗ್ಗೆ

ಶ್ರೀ ಚಲುವರಾಯಸ್ವಾಮಿ(ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರ ಕೊಪ್ಪ ಹೋಬಳಿಯಲ್ಲಿ ಚಿಕ್ಕದೊಡ್ಡಿ ಗ್ರಾಮದಲ್ಲಿ ತಿಮ್ಮೇಗೌಡ ಎನ್ನುವವರಿಗೆ 45–30 ಅಡಿಗಳ ಸೈಟ್ ಕೊಟ್ಟಿದ್ದಾರೆ. ಅವರು ಆಶ್ರಯ ಮನೆ ಯೋಜನೆಯಡಿಯಲ್ಲಿ ಅವರ ಹೆಂಡತಿಗೆ ಖಾತೆ ಬದಲಾವಣೆ ಮಾಡಿ sanction ಆಗಿದೆ. 5 ವರ್ಷ ಮನೆ ಕಟ್ಟುವುದಕ್ಕೆ ಅವಕಾಶವಿದೆ. ತಿಮ್ಮೇ

ಗೌಡ ಸತ್ತು ಹೋಗಿದ್ದಾನೆ. ಹೆಂಡತಿ ಬದುಕಿದ್ದಾಳೆ. ಆಶ್ರಯ ಯೋಜನೆಯಡಿ ಮೊದಲನೇ payment ತೆಗೆದುಕೊಂಡು foundation ಆಗಿ lintel level ವರೆಗೆ ಕಟ್ಟಡ ಕಟ್ಟಿದ್ದಾನೆ. ಇದನ್ನು ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಇದಕ್ಕೆ ಏನು ಮಾಡಬೇಕೆಂದು ಕೇಳಿ.

ಶ್ರೀ ಚಲುವರಾಯಸ್ವಾಮಿ : ಪೊಲೀಸ್‌ನವರು ಸರಿಯಾಗಿ ರಕ್ಷಣೆ ಕೊಡದೆ ಕೆಲಸ ನಿಂತಿದೆ. ನೀವು ಉತ್ತರ ಕೊಟ್ಟಿದ್ದೀರಿ. ನೀವು ಉತ್ತರವನ್ನು ಓದುವ ಅವಶ್ಯಕತೆಯಿಲ್ಲ. ನನಗೆ ಸ್ಪಷ್ಟವಾದ ಮಾಹಿತಿ ಇದೆ. ದಯವಿಟ್ಟು ಅವರು ಮನೆಯನ್ನು ಕಟ್ಟುವುದಕ್ಕೆ ರಕ್ಷಣೆ ಕೊಡುವಂತೆ ನಿಮ್ಮ ಪೊಲೀಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಿ.

ಅಧ್ಯಕ್ಷರು : ಸೂಕ್ತ ಪೊಲೀಸ್ ರಕ್ಷಣೆಯನ್ನು ಕೊಡಿ.

ಶ್ರೀ ಕೆ. ಜೆ. ಜಾರ್ಜ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಬಿದರಕೋಟೆ ಗ್ರಾಮಪಂಚಾಯತಿ ವ್ಯಾಪ್ತಿಯ ಚಿಕ್ಕದೊಡ್ಡಿ ಗ್ರಾಮದ ಮೂಗೇಗೌಡ ಮಗ ತಿಮ್ಮೇಗೌಡ 62 ವರ್ಷ, ಕೂಲಿ ಕಾರ್ಮಿಕ ಇವರಿಗೆ 24.04.2007ರಲ್ಲಿ ಆಶ್ರಯ ಯೋಜನೆ ಅನ್ವಯ 45–30 ಅಡಿಗಳ ನಿವೇಶನವು ಮಂಜೂರಾಗಿರುತ್ತದೆ. ವಸತಿ ಯೋಜನೆ ಹಕ್ಕುಪತ್ರದಲ್ಲಿ ಪತ್ನಿಯ ಹೆಸರನ್ನು ನಮೂದಿಸಬೇಕೆಂದ ನಿಯಮ ಇದ್ದರೂ ಕೂಡಾ ಅಧಿಕಾರಿಗಳು ಅದನ್ನು ಕೈಬಿಟ್ಟಿದ್ದಾರೆಂದು ವಿಷಯ ಇದೆ.

ಆದರೆ ಬಿದರಕೋಟೆ ಪಂಚಾಯತಿ ಕಾರ್ಯದರ್ಶಿಯವರು, ಉದ್ದೇಶ ಪೂರ್ವಕವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅದರ ಆಧಾರದ ಮೇಲೆ ಬೇರೊಬ್ಬರಿಗೆ ಈ ನಿವೇಶನವನ್ನು ಖಾತೆ ಮಾಡಿರುತ್ತಾರೆ. ಮದ್ದೂರು ತಾಲ್ಲೂಕು ಪಂಚಾಯತ್ ನ್ಯಾಯಾಲಯವು ಸುಮಾರು ಐದು ಬಾರಿ ಈ ಪ್ರಕರಣವನ್ನು ಕೂಲಂಕಷವಾಗಿ ವಿಚಾರಣೆ ನಡೆಸಿ, ಅಕ್ರಮವಾಗಿ ಬೇರೆಯವರಿಗೆ ಮಾಡಿರುವ ಖಾತೆಯನ್ನು ರದ್ದು ಪಡಿಸಿ, ತಿಮ್ಮೇಗೌಡರವರಿಗೆ ಈ ನಿವೇಶನ ಸೇರಿದ್ದೆಂದು ತೀರ್ಪು ನೀಡಿದೆ. ಮನೆ ನಿರ್ಮಿಸಲು ಅಡ್ಡಿಪಡಿಸಿ ಕೊಂಡು ಬಂದಿದ್ದಾರೆ. ಈ ಬಗ್ಗೆ ತಾಲ್ಲೂಕು ಪಂಚಾಯತಿಯವರು, ಪಿ.ಡಿ.ಓ.

ಅವರು ತಿಮ್ಮೇಗೌಡರ ಪರವಾಗಿ ನಿಂತು, ಈ ನಿವೇಶನವು ತಿಮ್ಮೇಗೌಡರಿಗೆ ಸೇರಿದ್ದೆಂದೂ ಕೆಲವರು ಇದರ ಬಗ್ಗೆ ಗಲಾಟೆ ಮಾಡುತ್ತಿದ್ದಾರೆಂದೂ, ತಿಮ್ಮೇ ಗೌಡರಿಗೆ ರಕ್ಷಣೆ ನೀಡಬೇಕೆಂದೂ ಕೊಪ್ಪ ಆರಕ್ಷಕ ಠಾಣೆಗೆ ಲಿಖಿತ ದೂರು ನೀಡಿ, ನೈಜ ಮಾಲೀಕರು ಖಾತೆದಾರರ ಪರವಾಗಿ ನಿಂತರೂ, ಸ್ಥಳೀಯ ಪೊಲೀಸರು ಸಹಕಾರ ನೀಡದೆ ಇದ್ದ ಕಾರಣ ಮನೆ ನಿರ್ಮಿಸಿಕೊಳ್ಳಲು ತೊಂದರೆ ಆಗಿದೆ. ಈ ಐದು ವರ್ಷಗಳ ಸುಧೀರ್ಘ ಹೋರಾಟದಲ್ಲಿ ತಿಮ್ಮೇ ಗೌಡರು ಮೃತರಾಗಿದ್ದಾರೆ. ಈಗ ಸದರಿ ತಿಮ್ಮೇಗೌಡರ ಪತ್ನಿ ಚಿಕ್ಕತಾಯ ಮ್ಮನವರ ಪಂಚಾಯತಿಯ ಅನುಮತಿ ಪಡೆದು 2012–13ನೇ ಸಾಲಿನಲ್ಲಿ ಬಸವವಸತಿ ಯೋಜನೆಯಡಿಯಲ್ಲಿ 1 ಕಂತು ಹಣವನ್ನು ಮಂಜೂರು ಮಾಡಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಮನೆ ನಿರ್ಮಿಸಿಕೊಳ್ಳಲು ಹೋದಾಗ ಕೆಲವರು ಅಡ್ಡಿ ಮಾಡಿ ಗೋಡೆಕಟ್ಟಿರುವುದನ್ನು ಕೆಡವಿ ಹಾಕಿದ್ದಾರೆ. ಸದರಿ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಲು ಹೋದಾಗ ತೊಂದರೆ ಮಾಡುತ್ತಿದ್ದಾರೆ. ಈ ಖಾತೆದಾರರಾದ ಚಿಕ್ಕತಾಯಮ್ಮನವರಿಗೆ ಸದರಿ ನಿವೇಶನ ದಲ್ಲಿ ಮನೆ ನಿರ್ಮಿಸಿಕೊಳ್ಳಲು ಕೆಲವರು ಅಡ್ಡಿ ಮಾಡುತ್ತಿದ್ದಾರೆಂದು ಅವರ ಹೆಸರುಗಳನ್ನು ನಮೂದಿಸಿ, ಕೊಪ್ಪ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರೂ, ಪೊಲೀಸರು ಚಿಕ್ಕತಾಯಮ್ಮನವರಿಗೆ ರಕ್ಷಣೆಯನ್ನಾಗಲೀ, ಅಡ್ಡಿ ಪಡಿಸುತ್ತಿರು ವವರ ವಿರುದ್ಧ ಕ್ರಮವನ್ನಾಗಲೀ ತೆಗೆದುಕೊಳ್ಳದೇ ಸುಮ್ಮನಿದ್ದಾರೆ. ಆದಕಾರಣ ಈ ಕೂಡಲೇ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಾಗೂ ಗೃಹ ಇಲಾಖೆಗಳು ಮಧ್ಯ ಪ್ರವೇಶ ಮಾಡಿ, ಖಾತೇ ದಾರರಾದ ಶ್ರೀಮತಿ ಚಿಕ್ಕತಾಯಮ್ಮನವರಿಗೆ ಮನೆ ನಿರ್ಮಿಸಿಕೊಳ್ಳಲು ಸೂಕ್ತ ರಕ್ಷಣೆ ಒದಗಿಸುವಂತೆ ಜಿಲ್ಲಾ ಪಂಚಾಯತ್ ಸಿ.ಇ.ಓ. ಮಂಡ್ಯ ಜಿಲ್ಲಾಧಿಕಾರಿ ಮತ್ತು ಮಂಡ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಆದೇಶ ನೀಡಬೇಕೆಂಬ ವಿನಂತಿಗೆ ಗೃಹ ಸಚಿವರ ಉತ್ತರ.

ದಿನಾಂಕ: 24.01.2007 ರಲ್ಲಿ ಸರ್ಕಾರದ ವಸತಿ ಯೋಜನೆ ಅಡಿ ಯಲ್ಲಿ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಚಿಕ್ಕದೊಡ್ಡಿ ಗ್ರಾಮದ ಮೂಗೇಗೌಡರ ಮಗ ತಿಮ್ಮೇಗೌಡ ರವರಿಗೆ ಅದೇ ಗ್ರಾಮದಲ್ಲಿ ನಿವೇಶನ

ಮಂಜೂರಾಗಿ ಹಕ್ಕು ಪತ್ರ ನೀಡಿರುವುದಾಗಿರುತ್ತದೆ. ಈ ವಿಚಾರದಲ್ಲಿ ಗ್ರಾಮ ದಲ್ಲಿ ಎರಡು ಗುಂಪುಗಳ ನಡುವೆ ವಿವಾದ ಉಂಟಾಗಿ ದಾವೆ ಹೂಡಿದ್ದು ಮತ್ತು ಈ ದಾವೆಯು ದಿನಾಂಕ 27.12.2011 ರಂದು ವಜಾ ಆಗಿರುತ್ತದೆ. ಖಾಲಿ ಸದರಿ ನಿವೇಶನದ ಖಾತೆಯು ಶ್ರೀಮತಿ ಚಿಕ್ಕತಾಯಮ್ಮ ಕೋಂ ತಿಮ್ಮೇಗೌಡರವರ ಹೆಸರಿನಲ್ಲಿರುತ್ತೆ ಮತ್ತು ಬಿದರಕೋಟೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದಿನಾಂಕ 12.10.2012ರಂದು ಸದರಿ ನಿವೇಶನದಲ್ಲಿ ಮನೆ ಕಟ್ಟಲು ಲೈಸೆನ್ಸ್ ನೀಡಿರುತ್ತಾರೆ.

ದಿನಾಂಕ: 15.11.2011 ರಂದು ತಾಲ್ಲೂಕು ಪಂಚಾಯಿತಿ ಕಾರ್ಯಾ ಲಯ ಮದ್ದೂರು ರವರಿಂದ ಸರ್ಕಲ್ ಇನ್ಸ್‌ಪೆಕ್ಟರ್ ಮದ್ದೂರು ಹಾಗೂ ಆರಕ್ಷಕ ಉಪನಿರೀಕ್ಷಕರು ಕೊಪ್ಪರವರಿಗೆ ಪತ್ರ ಬರೆದು ಮೇಲ್ಕಂಡ ವಿಷಯವು ಅಂದರೆ ಅಸೆಸ್‌ಮೆಂಟ್ ವಿಚಾರಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಆದೇಶಗಳು ಗೊಂದಲಮಯವಾಗಿದ್ದು ಪಂಚಾ ಯತ್‌ರಾಜ್ 1993 ಅಧಿನಿಯಮಕ್ಕೆ ವಿರುದ್ಧವಾಗಿರುವ ಕಾರಣ ಉಚ್ಚ ನ್ಯಾಯಾಲಯದ ಆದೇಶದ ಅನ್ವಯ ಸದರಿ ಸಮಸ್ಯೆಯನ್ನು ಸಿವಿಲ್ ನ್ಯಾಯಾ ಲಯದಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ಸೂಚಿಸಿರುತ್ತವೆ ಎಂದು ಆದೇಶಿ ಸಿರುತ್ತಾರೆ.

ದಿನಾಂಕ 26.11.2012ರಂದು ಮದ್ದೂರು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಯವರು ಶ್ರೀಮತಿ ಚಿಕ್ಕತಾಯಮ್ಮರವರು ಮನೆ ನಿರ್ಮಿಸಿಕೊಳ್ಳಲು ಲೈಸೆನ್ಸ್ ನೀಡಿದ್ದು ಲೈಸೆನ್ಸ್ ನಿಯಮಾನುಸಾರ ಮನೆ ನಿರ್ಮಿಸಿಕೊಳ್ಳಲು ರಕ್ಷಣೆ ನೀಡಬಹುದಾಗಿರುತ್ತದೆ ಎಂದು ಪಿ.ಎಸ್.ಐ. ಕೊಪ್ಪ ರವರಿಗೆ ಪತ್ರ ಬರೆದಿರುತ್ತಾರೆ.

ದಿನಾಂಕ 28.01.2013ರಂದು ತಹಶೀಲ್ದಾರ್ ಮದ್ದೂರು ತಾಲ್ಲೂಕು ರವರು ದಿನಾಂಕ 04.02.2013ರಂದು ಮೇಲ್ಕಂಡ ನಿವೇಶನದಲ್ಲಿ ಮನೆ ಕಟ್ಟಲು ಚಿಕ್ಕತಾಯಮ್ಮನವರಿಗೆ ರಕ್ಷಣೆ ನೀಡುವ ಸಲುವಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು ನಿಯಮಾನುಸಾರ ರಕ್ಷಣೆ

ನೀಡುವಂತೆ ಸೂಚಿಸಿದ್ದು ಅದರಂತೆ 04.02.2013 ರಂದು ಪಿ.ಎಸ್.ಐ. ಮುನಿಯಪ್ಪ ಹಾಗೂ ಸಿಬ್ಬಂದಿಯವರು ರಕ್ಷಣೆ ನೀಡಲು ಹೋದಾಗ ಗ್ರಾಮದಲ್ಲಿ ಎರಡೂ ಕಡೆಯವರು ಗ್ರಾಮದಲ್ಲಿ ಎರಡು ಗುಂಪುಗಳಾಗಿ ಗಲಾಟೆಗಳನ್ನು ಮಾಡಿಕೊಂಡಿದ್ದರಿಂದ ಕೆಲಸ ಸ್ಥಗಿತಗೊಂಡಿರುತ್ತದೆ ಮತ್ತು ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಸಂಬಂಧ ಮುನ್ನೆಚ್ಚರಿಕೆ ಕ್ರಮವಾಗಿ 107 ಸಿ.ಆರ್.ಪಿ.ಸಿ. ರಂತೆ ಪ್ರಕರಣಗಳು ದಾಖಲಾಗಿರುತ್ತವೆ. ಅಲ್ಲದೆ ಇದಕ್ಕೆ ಮೊದಲು ಇನ್ನೂ ನಾಲ್ಕು ಪ್ರಕರಣಗಳು ದಾಖಲಾಗಿರುತ್ತವೆ.

ಈ ವಿಷಯವಾಗಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಆದೇಶಗಳು ಭಿನ್ನವಾಗಿದ್ದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ತಹಶೀಲ್ದಾರ್ ಮದ್ದೂರು ರವರು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿದರಕೋಟೆರವರು ಮೇಲ್ಕಂಡ ಶ್ರೀಮತಿ ಚಿಕ್ಕತಾಯಮ್ಮರವರಿಗೆ ಮನೆ ಕಟ್ಟಲು ಯಾವುದೇ ಅಭ್ಯಂತರವಿರುವುದಿಲ್ಲ ರಕ್ಷಣೆ ನೀಡಬಹುದೆಂದು ಸೂಚಿಸಿರುತ್ತಾರೆ.

ಈ ವಿಚಾರದಲ್ಲಿ ಮದ್ದೂರು ತಾಲ್ಲೂಕು, ಬಿದರಕೋಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಚಿಕ್ಕದೊಡ್ಡಿ ಗ್ರಾಮದ ವಾಸಿ ಶ್ರೀಮತಿ ಚಿಕ್ಕತಾಯಮ್ಮ ರವರ ಹೆಸರಿಗೆ ಖಾತೆ ಮಾಡಿರುವ ಜಮೀನು ಯಾವುದೆಂದು ಸ್ಥಳೀಯ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು ವಿವಾದಿತ ಸ್ಥಳ ಯಾವುದೆಂದು ನಿಖರವಾಗಿ ಗುರುತಿಸಿಕೊಟ್ಟಲ್ಲಿ ಆ ತಕ್ಷಣವೇ ಪೊಲೀಸ್ ಇಲಾಖಾ ವತಿಯಿಂದ ಸೂಕ್ಷ್ಮ ರಕ್ಷಣೆಯನ್ನು ಒದಗಿಸಲಾಗುವುದು.

ಶ್ರೀ ಕೆ. ಜೆ. ಜಾರ್ಜ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಚಲುವರಾಯಸ್ವಾಮಿಯವರು ಪ್ರಸ್ತಾಪಿಸಿರುವ ಸೈಟ್ ಚಿಕ್ಕತಾಯಮ್ಮನವರಿಗೆ ಸೇರಿದೆ.

ಅಧ್ಯಕ್ಷರು: Sub-Inspector ನಿಮ್ಮ ಮಾತನ್ನು ಕೇಳುವುದಿಲ್ಲವೇ?

ಶ್ರೀ ಕೆ. ಜೆ. ಜಾರ್ಜ್: ಚಲುವರಾಯಸ್ವಾಮಿಯವರು ಹೇಳುವುದನ್ನು ಒಪ್ಪುಕೊಳ್ಳುತ್ತೇನೆ. ಸೈಟ್‌ನ್ನು ಸರ್ವೆ ಮಾಡಿಬಿಟ್ಟು, ಶಾಸಕರೇ ನಿಂತು ಸೈಟ್ ಎಲ್ಲಿದೆ ಎಂದು ಪೊಲೀಸ್‌ನವರಿಗೆ ತೋರಿಸಿಕೊಟ್ಟರೆ ರಕ್ಷಣೆ ಕೊಡುತ್ತೇವೆ.

ಶ್ರೀ ಚಲುವರಾಯಸ್ವಾಮಿ: Foundation ಆಗಿದೆ.

ಅಧ್ಯಕ್ಷರು: ಯಾರದ್ದಾದರೂ ಹಕ್ಕಿನಲ್ಲಿದೆಯೇ ಅಥವಾ ಯಾರದ್ದಾದರೂ ಹೆಸರಿನಲ್ಲಿ ಖಾತೆ ಆಗಿರುವ ಜಾಗದಲ್ಲಿ ಸೈಟ್ ಇದೆಯೇ?

ಶ್ರೀ ಚಲುವರಾಯಸ್ವಾಮಿ: ಚಿಕ್ಕತಾಯಮ್ಮನವರ ಹೆಸರಿಗೆ ಖಾತೆಯಾಗಿದೆ.

ಅಧ್ಯಕ್ಷರು: ಅವರ ಹೆಸರಿನಲ್ಲೇ ಖಾತೆಯಾಗಿದ್ದರೆ ಆಯಿತಲ್ಲ.

ಶ್ರೀ ಕೆ. ಜೆ. ಜಾರ್ಜ್: ಸರ್ ಈಗ ನಾವು ಕೇಳುತ್ತಿರುವುದು, ಆ ಸ್ಥಳೀಯ ಕಂದಾಯ ಅಧಿಕಾರಿಗಳು ಇದೇ ಅವರ ನಿವೇಶನವೆಂದು ಹೇಳಿದರೆ ಆ ಮನೆ ಕಟ್ಟುವುದಕ್ಕೆ ಸಂಪೂರ್ಣವಾದ ರಕ್ಷಣೆಯನ್ನು ಕೊಡುತ್ತೇವೆ, ತಹಶೀಲ್ದಾರ್ ನಮಗೆ ತೋರಿಸಿಕೊಟ್ಟರೆ ಅವರಿಗೆ ಪೊಲೀಸ್ ರಕ್ಷಣೆ ಕೊಡುತ್ತೇವೆ, ಅವರು ಮನೆ ಕಟ್ಟುವುದಕ್ಕೆ ಎಲ್ಲಾ ಸಹಯಾವನ್ನು ಮಾಡುತ್ತೇವೆ.

ಅಧ್ಯಕ್ಷರು: ಶಿವಲಿಂಗೇ ಗೌಡರವರೆ, ಅವರು ಎಲ್ಲೊ ಹೋಗಿದ್ದಾರೆ, ನನಗೆ ಪತ್ರ ಕೊಟ್ಟಿದ್ದಾರೆ, ನಿಮ್ಮದನ್ನು ನಾಳೆ ತೆಗೆದುಕೊಳ್ಳೋಣ.

xii) ವಿಷಯ: ದಿನಾಂಕ 13.12.2013ರಂದು ಉಳ್ಳಾಗಡ್ಡಿ ದರ ಕುಸಿದಾಗ ಹುಬ್ಬಳ್ಳಿ APMC ಎದುರಿಗೆ ನಡೆದ ಸಂದರ್ಭದಲ್ಲಿ 150 ಜನ ರೈತರ ಮೇಲೆ ಹಾಕಿದ ಕೇಸ್ ವಾಪಸ್ಸು ಪಡೆಯುವ ಕುರಿತು.

ಶ್ರೀ ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರವನ್ನು ನೀಡಿದ್ದಾರೆ (ಪ್ರತಿಯನ್ನು ಲಗತ್ತಿಸಿದೆ). 2012–13 ರಲ್ಲಿ ದಿನಾಂಕ: 13.12.2013 ರಲ್ಲಿ ರಾಜ್ಯದಲ್ಲಿ ಉಳ್ಳಾಗಡ್ಡಿ ಬೆಲೆ ಒಮ್ಮೆಲೆ ರೂ. 1000 ಇದ್ದದ್ದು ರೂ. 300 ಆದಾಗ ರೈತರು ಹುಬ್ಬಳ್ಳಿ ಎಪಿಎಂಸಿ ಎದುರಿಗೆ ಸ್ಟ್ರೈಕ್ ಮಾಡಿದರು. ಅದಕ್ಕೆ ಕೇವಲ 203 ಕಲಂ ಪ್ರಕಾರ ಅವರ ಮೇಲೆ ಕೇಸ್ ಹಾಕಿದ್ದಾರೆಂದು ನಾನು